LAC No. 5767/2021 C/W.
LAC Nos.5765, 5766, 5762, 5770, 5771,
5773, 5775, 5777 and 5778/2021
P.W.1.

**ಸಾಕ್ಷಿಯನ್ನು ದಿಃ 18.07.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಎಜಿಪಿ ರವರಿಂದ 1 ಮತ್ತು 3 ನೇ ಎದುರುದಾರರ ಪರ**

ನನ್ನ ಮತ್ತು ಉಳಿದ ಅರ್ಜಿದಾರರ ಜಮೀನುಗಳು 2 ಕಿಮೀ ಅಂತರದಲ್ಲಿ ಬರುತ್ತವೆ. ನನ್ನ ಮತ್ತು ಅವರ ಜಮೀನುಗಳ ಗುಣಮಟ್ಟ ಒಂದೇ ಇರುತ್ತದೆ. ಎದುರುದಾರರು ಜಮೀನಿಗೆ ಭೇಟಿಕೊಟ್ಟಿರುತ್ತಾರೆ ಅಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಇರಲಿಲ್ಲ ಎಂದು ಹೇಳುತ್ತಾರೆ. ನಮಗೆ ನೋಟಿಸ ನೀಡಿರುತ್ತಾರೆ ಅಂದರೆ ಸರಿ. ನೋಟಿಸ ಬಂದ ಮೇಲೆ ಲಿಖಿತ ರೂಪದಲ್ಲಿ ಯಾವುದೇ ತಕರಾರು ಸಲ್ಲಿಸಿಲ್ಲ. ಅರ್ಜಿಯನ್ನು ನಿಗದಿತ ಕಾಲಮಿತಯೊಳಗೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಎಲ್ಲಾ ಜಮೀನುಗಳ ಉತಾರೆಗಳಲ್ಲಿ ಖುಷ್ಕಿ ಜಮೀನು ಎಂದು ಕಾಣಿಸಲಾಗಿದೆ ಅಂದರೆ ಸಾಕ್ಷಿಯು ನೀರಾವರಿ ಜಮೀನುಗಳು ಇವೆ ಎಂದು ಹೇಳುತ್ತಾರೆ. ಎದುರುದಾರರು ನೀಡಿರುವ ಪರಿಹಾರ ಕಾನೂನಾತ್ಮಕವಾಗಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

2. ಸ್ವಾಧೀನಪಡಿಸಿಕೊಂಡ ಜಮೀನುಗಳು ಖುಷ್ಕಿ ಜಮೀನುಗಳಿದ್ದು, ನೀಡಿರುವ ಪರಿಹಾರ ಯೋಗ್ಯ ಮತ್ತು ಸಮಂಜಸವಾಗಿದೆ ಅಂದರೆ ಸರಿಯಲ್ಲ. ಜಮೀನುಗಳು ನೀರಾವರಿ ಜಮೀನುಗಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಕಬ್ಬು, ಶೇಂಗಾ, ಸೂರ್ಯಕಾಂತಿ ಮತ್ತು ಉಳ್ಳಾಗಡ್ಡಿ ಬೆಳೆಯುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಬೆಳೆಗಳನ್ನು ಬೆಳೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಜಮೀನು ಸುತ್ತಮುತ್ತ 2 ಕಿಮೀ ಒಳಗೆ ಯಾವುದೇ ಸಕ್ಕರೆ ಕಾರ್ಖಾನೆ ಮತ್ತು ಶಾಲೆಗಳು ಇಲ್ಲ ಅಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ನಂತರ ನಮ್ಮ ಜಮೀನುಗಳು ತುಂಡು ಜಮೀನುಗಳಾಗಿದ್ದು, ವ್ಯವಸಾಯ ಮಾಡಲು ಬರುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜಮೀನುಗಳ ಖರೀದಿಕರಾರುಪತ್ರಗಳನ್ನು ಉದ್ದೇಶಪೂರ್ವಕವಾಗಿ ಸುಳ್ಳು ಸೃಷ್ಟಿಮಾಡಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ನಿ.ಪಿ.15 ರಿಂದ 18 ಈ ಪ್ರಕರಣಕ್ಕೆ

ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ಎದುರುದಾರರು ಭೂಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನೋಟಿಸ ನೀಡಿ, ಜಮೀನಿಗೆ ಭೇಟಿಕೊಟ್ಟಿರುತ್ತಾರೆ ಅಂದರೆ ಸರಿ. ಎದುರುದಾರರು ನನ್ನ ಸಮಕ್ಷಮ ಸ್ಥಳತನಿಖೆ ಕೈಗೊಂಡಿದ್ದಾರೆ ಅಂದರೆ ಸರಿಯಲ್ಲ. ಸ್ಥಳತನಿಖೆ ಕಾಲಕ್ಕೆ ನಮ್ಮ ಜಮೀನು ನೀರಾವರಿ ಜಮೀನು ಅಲ್ಲ ಎಂದು ಕಂಡುಬಂದಿರುತ್ತದೆ ಅಂದರೆ ಸರಿಯಲ್ಲ. ನನಗೆ ನೋಟಿಸ ಕೊಟ್ಟಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಗದಿತ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ನಿ.ಪಿ.13 ರಿಂದ 18 ನಮ್ಮ ಜಮೀನಿಗೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಲುವಾಗಿ ನಿ.ಪಿ.13 ರಿಂದ 18 ನ್ನು ಸುಳ್ಳು ಸೃಷ್ಟಿಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ.19 ರಲ್ಲಿ ಕಂಡುಬರುವ ಅಂಶ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಸ್ವಾಧೀನಪಡಿಸಿಕೊಂಡ ಜಮೀನುನೀರಾವರಿ ಜಮೀನು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ಜಮೀನಿನಿಂದ ಎಕರೆಗೆ 15 ಲಕ್ಷ ರೂ. ಆದಾಯ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಅಂದರೆ ಸರಿಯಲ್ಲ. ಎದುರುದಾರರು ಯೋಗ್ಯ ಪರಿಹಾರ ನೀಡಿದ್ದಾರೆ ಅಂದರೆ ಸರಿಯಲ್ಲ. ನಿ.ಪಿ.13 ಮತ್ತು14 ಖರೀದಿ ಕರಾರುಪತ್ರಗಳ ಅವಧಿ ಮುಗಿದಿದ್ದು, ಅದರಡಿಯಲ್ಲಿ ಇನ್ನೂ ಖರೀದಿ ಪತ್ರಗಳು ಆಗದೇ ಇರುವ ಕಾರಣ, ಸದರಿ ದಾಖಲೆಗಳನ್ನು ಹೆಚ್ಚಿನ ಪರಿಹಾರಕ್ಕೆಂದು ಖೊಟ್ಟಿಯಾಗಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ.

4. ಎದುರುದಾರರು ಕಡಿಮೆ ಮಾರುಕಟ್ಟೆ ಬೆಲೆಯ ಖರೀದಿಪತ್ರಗಳನ್ನು ಅನುಸರಿಸಿ ನಮ್ಮ ಜಮೀನುಗಳಿಗೆ ಕಡಿಮೆ ಮಾರುಕಟ್ಟೆ ಬೆಲೆ ನಿಗದಿಪಡಿಸಿ, ಕಡಿಮೆ ಪರಿಹಾರ ಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಕಬ್ಬು ಮತ್ತು ದ್ರಾಕ್ಷಿ ಬೆಳೆಯುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಭೂಸ್ವಾಧೀನ ಪೂರ್ವದಲ್ಲಿ ಜಮೀನುಗಳ ಕಿಮ್ಮತ್ತು ಎಕರೆಗೆ 1 ಕೋಟಿ ರೂ. ಗೂ ಅಧಿಕ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ನಾನು ಕೃಷ್ಣ ನದಿಯಿಂದ ಪೈಪುಗಳನ್ನು ಅಳವಡಿಸಿಕೊಂಡು ನಮ್ಮ ಜಮೀನಿಗೆ ನೀರು ಹಾಯಿಸುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ. ನಾನು ಕೊಳವೆ ಬಾವಿ ಜಮೀನಿನಲ್ಲಿ ಅಳವಡಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಅದರ ಬಗ್ಗೆ ನಿ.ಪಿ.1 ರಿಂದ 10 ರಲ್ಲಿ ಎಲ್ಲೂ ನಮೂದು ಇಲ್ಲ ಅಂದರೆ ಸರಿಯಲ್ಲ. ನಾನು ದ್ರಾಕ್ಷಿ ಬೆಳೆದ ಬಗ್ಗೆ ನನ್ನ ಜಮೀನಿನ ಆರ್ ಟಿ ಸಿ ಗಳಲ್ಲಿ ನಮೂದು ಇಲ್ಲ ಹಾಗೂ ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

6. ನಮ್ಮ ಗೋಠೆ ಗ್ರಾಮದಲ್ಲಿ ಪ್ರತಿವರ್ಷ ನೀರಾವರಿ ಜಮೀನುಗಳು ಮಾರಾಟ ಆಗುತ್ತವೆ ಅಂದರೆ ಸರಿ. ನನ್ನ ಪ್ರಮಾಣಪತ್ರದ 7 ನೇ ಪ್ಯಾರಾದಲ್ಲಿ ನಮೂದಿಸಿದ ಖರೀದಿ ಪತ್ರಗಳು ನಮ್ಮ ಗ್ರಾಮಕ್ಕೆ ಸಂಬಂಧಪಟ್ಟವು ಅಲ್ಲ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಖರೀದಿ ಕರಾರು ಮತ್ತು ಕ್ರಯಪತ್ರಗಳು ಭೂಸ್ವಾಧೀನದ ನಂತರ ಆದ ದಾಖಲೆಗಳು ಅಂದರೆ ಸರಿ. ನನ್ನ ಜಮೀನಿನ ಪಕ್ಕದಲ್ಲಿ ಯಾವುದೇ ರಾಜ್ಯಹೆದ್ದಾರಿ ಹಾದುಹೋಗುವುದಿಲ್ಲ ಅಂದರೆ ಸರಿಯಲ್ಲ. ನನ್ನ ಜಮೀನಿನ ಪಕ್ಕದಲ್ಲಿ ನಂದಿ ಸಕ್ಕರೆ ಕಾರ್ಖಾನೆ ಮತ್ತು ಸಿ ಬಿ ಎಸ್ ಸಿ ಶಾಲೆಗಳು ಇದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ಕಾರ್ಖಾನೆ ಮತ್ತು ಶಾಲೆಗಳ ಅಂತರ ನನ್ನ ಜಮೀನಿನಿಂದ 2 ಕಿಮೀ ಅಂತರದ ಒಳಗೆ ಇದೆ ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

7. ನಿಪಿ.19 ಯಾವ ಊರಿಗೆ ಸಂಬಂಧಪಟ್ಟಿದ್ದು ಎಂದು ಗೊತ್ತಿಲ್ಲ. ನಿ.ಪಿ.19 ರ ತೀರ್ಪಿನ ವಿರುದ್ಧ ಸರ್ಕಾರದವರು ಮೇಲ್ಮನವಿ ಸಲ್ಲಿಸಿದ ಬಗ್ಗೆ ಮಾಹಿತಿ ಇದೆ. ನಿ.ಪಿ.19 ರ ತೀರ್ಪಿನ ಜಮೀನಿಗೂ ನಮ್ಮ ಜಮೀನಿಗೂ ತುಂಬಾ ವ್ಯತ್ಯಾಸ ಇದೆ ಅಂದರೆ ಸರಿಯಲ್ಲ. ಆದ್ದರಿಂದ ನಿ.ಪಿ.19 ನನ್ನ ಪ್ರಕರಣಕ್ಕೆ ಅನ್ವಯಿಸುವುದಿಲ್ಲ

LAC No. 5767/2021 C/W.
LAC Nos.5765, 5766, 5762, 5770, 5771,
5773, 5775, 5777 and 5778/2021
P.W.1.

ಅಂದರೆ ಸರಿಯಲ್ಲ. ನನ್ನ ಜಮೀನು ಪ್ರತಿ ಎಕರೆಗೆ 1 ಕೋಟಿ ರೂ. ಬೆಲೆಬಾಳುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ನೇ ಎದುರುದಾರರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2025.08.14 16:20:38 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ